# ಹೆಣ್ಮಕ್ಳೇ ಸ್ಟ್ರಾಂಗು!





ಕೋವಿಡ್‌ನಿಂದಾಗಿ ಪ್ರಾಣ ಕಳೆದುಕೊಂಡವರಲ್ಲಿ ಶೇ. 70ರಷ್ಟು ನತದೃಷ್ಟರು ಪುರುಷರೇ ಆಗಿದ್ದಾರೆ. ಯಾಕೆ? ಹೆಣ್ಣುಮಕ್ಕಳ ರೋಗ ಪ್ರತಿರೋಧ ಶಕ್ತಿ ಗಂಡಿಗಿಂತ ಹೆಚ್ಚಿನದೆ?

■ ಲಕ್ಷ್ಮೀದೇವಿ ಪಾಟೀಲ

‘ವಿಶ್ವ ಆರೋಗ್ಯ ಸಂಸ್ಥೆ’ಯ ಪ್ರಕಾರ, ಕೋವಿಡ್ ಸಾಂಕ್ರಾಮಿಕದಿಂದ ಸಾವಿಗೀಡಾದವರಲ್ಲಿ ಮಹಿಳೆಯರಿಗಿಂತಲೂ ಪುರುಷರ ಪ್ರಮಾಣ ಹೆಚ್ಚು. ‘ಹೆಣ್ಮಕ್ಳೇ ಸ್ಟ್ರಾಂಗು ಗುರು’ ಎನ್ನುವ ಸಿನಿಮಾ ಹಾಡನ್ನು ಗಟ್ಟಿಯಗಿ ಹಾಡುವ ಸಮಯವಿದು.

ಹೆಣ್ಣುಮಕ್ಕಳ ಗಟ್ಟಿತನದ ಬಗ್ಗೆ ಮತ್ತಷ್ಟು ಅಂಕಿಅಂಶಗಳ ಬೆಂಬಲvide. ಗಂಡಸರ ಸರಾಸರಿ ಆಯುಸ್ಸು 76 ವರ್ಷ. ಹೆಣ್ಣುಮಕ್ಕಳ ಸರಾಸರಿ ಜೀವಿತಾವಧಿ 81.1 ವರ್ಷ. ಚೀನಾದಲ್ಲಿ ಕಳೆದ ಫೆಬ್ರುವರಿ ಅಂತ್ಯಕ್ಕೆ ಲಭ್ಯವಾದ ಅಂಕಿಅಂಶಗಳು ಹೇಳುವಂತೆ, ಕೊರೊನಾ ಬಾಧಿತ ಪುರುಷರ ಪ್ರಮಾಣ ಶೇ.58. ವಿಶ್ವದಾದ್ಯಂತ ಏಪ್ರಿಲ್ ಅಂತ್ಯಕ್ಕೆ ಕೋವಿಡ್‌ನಿಂದ ಸತ್ತವರಲ್ಲಿ ನೂರಕ್ಕೆ 70ರಷ್ಟು ಗಂಡಸರು. ಪುರುಷರ ಮರಣ ಪ್ರಮಾಣ ಹೆಚ್ಚಾಗಿರುವುದಕ್ಕೆ ಜೈವಿಕ ಕಾರಣಗಳು, ಜೀವನಶೈಲಿ ಮತ್ತು ವಿಕಾಸಾತ್ಮಕ ಕಾರಣಗಳು ಮುಖ್ಯವಾದವು.

ಮನುಷ್ಯನ ದೇಹದಲ್ಲಿ 46 ವರ್ಣತಂತುಗಳಿವೆ. ಅವುಗಳಲ್ಲಿ ‘ಎಕ್ಸ್’ ಮತ್ತು ‘ವೈ’ ವರ್ಣತಂತುಗಳು ಲಿಂಗವನ್ನು ನಿರ್ಧರಿಸುತ್ತವೆ. ಮಹಿಳೆಯರಲ್ಲಿ ಎರಡು ‘ಎಕ್ಸ್’ ವರ್ಣತಂತುಗಳು ಇದ್ದರೆ. ಪುರುಷರ ದೇಹದಲ್ಲಿ ‘ಎಕ್ಸ್’ ಮತ್ತು ‘ವೈ’ ವರ್ಣತಂತುಗಳು ಇರುತ್ತವೆ. ‘ವೈ’ ವರ್ಣತಂತುಗಳು

